# ಮುಕ್ತಾಯಕ್ಕಳ ವಚನಗಳಲ್ಲಿ ಅನುಭಾವದ ನೆಲೆಗಳು

**ಮಹಾದೇವಿ ಹುಣಶೀಬೀಜ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ ರಾಜಾ ಲಖಮಗೌಡ ವಿಜ್ಞಾನ ಮಹಾವಿದ್ಯಾಲಯ, ಬೆಳಗಾವಿ.

DOI: https://doi.org/10.5281/zenodo.15795712

## ABSTRACT:

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 12ನೇ ಶತಮಾನವು ಸಾಮಾಜಿಕ, ಧಾರ್ಮಿಕ, ವೈಚಾರಿಕ ನೆಲೆಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮುಕ್ತವಾಗಿಸಿದ ಸುವರ್ಣಕಾಲವೆಂದು ಕರೆಸಿಕೊಳ್ಳುತ್ತದೆ. ಈ ಅವಧಿಯಲ್ಲಿ ಪುರುಷರಂತೆ ಮಹಿಳೆಯರು ಸ್ವಭಿಪ್ರಾಯಗಳನ್ನು ವ್ಯಕ್ತಪಡಿಸಲು ವಚನ ಸಾಹಿತ್ಯವು ವೇದಿಕೆಯನ್ನು ಒದಗಿಸಿತು. ಬಸವಾದಿ ಪ್ರಮಥರು ನೀಡಿದ ಪ್ರೋತ್ಸಾಹದಿಂದಾಗಿ ಹಲವಾರು ಶರಣೆಯರು ವಚನಗಳನ್ನು ರಚಿಸಿ ಅನುಭಾವ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಮಹಾಮನೆಯಲ್ಲಿ ಚರ್ಚೆಗಿಳಿದು ತಮ್ಮ ಗೊಂದಲಗಳಿಗೆ ಪರಿಹಾರವನ್ನೂ ಕಂಡುಕೊಂಡಿದ್ದಾರೆ. ಅವರಲ್ಲಿ ಮುಖ್ಯವಾಗಿ ಅಕ್ಕಮಹಾದೇವಿ ಮತ್ತು ಮುಕ್ತಾಯಕ್ಕ ಪ್ರಮುಖರು. ಅದರಲ್ಲೂ ಅಲ್ಲಮಪ್ರಭುಗಳನ್ನೇ ಪರೀಕ್ಷಿಸಿ ಗುರುವಾಗಿ ಸ್ವೀಕರಿಸಿದ ಮುಕ್ತಾಯಕ್ಕಳ ಅನುಭಾವದ ನೆಲೆ ಇತರ ಶರಣೆಯರಿಗಿಂತ ಭಿನ್ನವಾದುದು. ಸಹೋದರ ಅಜಗಣ್ಣನ ಮಾರ್ಗದಲ್ಲಿ ನಡೆದ ಮುಕ್ತಾಯಕ್ಕ ಅದ್ವೈತದ ಅನುಭೂತಿಯನ್ನು ಪಡೆದವಳು. ಮುಕ್ತಾಯಕ್ಕಳ ಸುಮಾರು 37 ವಚನಗಳು ದೊರೆತಿವೆ. ಅವು ಅಲ್ಲಮ ಮುಕ್ತಾಯಕ್ಕರ ಸಂವಾದದ ರೂಪದಲ್ಲಿವೆ ಎಂದು ಮೇಲ್ನೋಟಕ್ಕೆ ಕಂಡರೂ ಅವುಗಳಲ್ಲಿ ವ್ಯಕ್ತವಾಗಿರುವ ವಿಚಾರಧಾರೆಗಳು ಆಕೆಯು ಕಂಡ ಆಧ್ಯಾತ್ಮಿಕ ಅನುಭೂತಿಯ ಉತ್ತುಂಗಕ್ಕೆ ಸಾಕ್ಷಿಯಾಗಿವೆ. ಈ ಪ್ರಬಂಧದಲ್ಲಿ ಮುಕ್ತಾಯಕ್ಕಳ ವಚನಗಳನ್ನು ಅನುಭಾವದ ನೆಲೆಯಲ್ಲಿ ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

## KEYWORDS:

ಅದ್ವೈತ, ಅನುಭಾವ, ಅರಿವು, ಮರೆವು, ಶರಣ.

---

12ನೇ ಶತಮಾನವು ಸಾಮಾಜಿಕ, ಧಾರ್ಮಿಕ ಹಾಗೂ ವೈಚಾರಿಕ ನೆಲೆಗಳಲ್ಲಾದ ಮಹತ್ವದ ಬದಲಾವಣೆಗಳಿಂದಾಗಿ ಕನ್ನಡ ನಾಡಿನ ಸಂಕ್ರಮಣ ಕಾಲವೆಂದು ಕರೆಸಿಕೊಳ್ಳುತ್ತದೆ. ಈ ಅವಧಿಯಲ್ಲಿ ಬಸವಾದಿ ಶಿವಶರಣರ ವಿಚಾರಧಾರೆಗಳು ಮಹಿಳೆಯರಿಗೆ ಪುರುಷರಂತೆ ಸಮಾನ ಅವಕಾಶಗಳನ್ನು ಕಲ್ಪಿಸಿದವು. ಅವರ ಪ್ರೋತ್ಸಾಹದಿಂದಾಗಿ ದೊರೆತ ಅಭಿವ್ಯಕ್ತಿ ಸ್ವಾತಂತ್ರ್ಯ ಮಹಿಳೆಯರಲ್ಲಿ ಹೊಸ ಚೈತನ್ಯವನ್ನು ತಂದಿತು. ಮಹಿಳೆಯರು ಕೂಡ ಕೌಟುಂಬಿಕ, ಸಾಮಾಜಿಕ ನೆಲೆಯಲ್ಲಿ

ಅಷ್ಟೇ ಅಲ್ಲದೆ ಧಾರ್ಮಿಕ ಕ್ಷೇತ್ರದಲ್ಲಿಯೂ ಕೂಡ ಪುರುಷನಷ್ಟೇ ಸಮಾನವಾಗಿ, ಸಮರ್ಥವಾಗಿ ಕಾರ್ಯ ಮಾಡಲು ಸಾಧ್ಯವಾಯಿತು. ಮಹಿಳೆಯರು ಕಠಿಣವೆಂದೆಣಿಸಿದ ಯೋಗ, ಆಧ್ಯಾತ್ಮಿಕತೆಯಲ್ಲಿ ಸಾಧನೆ ಮಾಡಲು ಉನ್ನತ ಸಿದ್ಧಿ ಸಾಧಿಸಲು ಆ ಕುರಿತು ವಿಚಾರ ಮಂಡಿಸಲು ಸಾಮರ್ಥ್ಯವನ್ನು ಪಡೆದರು. ಆ ದಿಶೆಯಲ್ಲಿ ಮೂಡಿ ಬಂದವುಗಳೇ ಕನ್ನಡದ ಪ್ರಥಮ ಮಹಿಳಾ ಸಾಹಿತ್ಯವೆನಿಸಿಕೊಂಡಿರುವ ಶಿವಶರಣೆಯರ ವಚನಗಳು. ಅಕ್ಕಮಹಾದೇವಿ, ಗಂಗಾಂಬಿಕೆ, ನೀಲಾಂಬಿಕೆ, ಅಕ್ಕನಾಗಮ್ಮ, ಸತ್ಯಕ್ಕ, ಕಾಳವ್ವೆ, ಸಂಕವ್ವೆ, ಅಕ್ಕಮ್ಮ, ಲಕ್ಕಮ್ಮ, ರಾಯಮ್ಮ, ರೆಮ್ಮವ್ವೆ, ಮುಕ್ತಾಯಕ್ಕ ಹೀಗೆ ಸುಮಾರು 37 ಶಿವಶರಣೆಯರು ಅರ್ಥಪೂರ್ಣವಾದ ವಚನಗಳನ್ನು ರಚಿಸಿದರು ಹಾಗೂ ಅಲ್ಲಮಪ್ರಭುಗಳೊಟ್ಟಿಗೆ ಸಂವಾದ, ಚಿಂತನ ಮತ್ತು ಚರ್ಚೆಗಳನ್ನು ಮಾಡಿದರು. ಅಲ್ಲಮಪ್ರಭುಗಳನ್ನೇ ಪ್ರಶ್ನೆ ಮಾಡುವ ಧೈರ್ಯ ತೋರಿದ ಶಿವಶರಣೆಯರೆಂದರೆ ಅಕ್ಕಮಹಾದೇವಿ ಮತ್ತು ಮುಕ್ತಾಯಕ್ಕ. ಅಕ್ಕಮಹಾದೇವಿ ತಾರ್ಕಿಕ ಜ್ಞಾನಮಾರ್ಗ ಹೊಂದಿದ್ದರೆ ಮುಕ್ತಾಯಕ್ಕ ವೈಚಾರಿಕತೆಯ ನಿಲುವಿನ ಜ್ಞಾನಮಾರ್ಗ ಹೊಂದಿದವಳಾಗಿದ್ದಳು. ಮುಕ್ತಾಯಕ್ಕನನ್ನು ದಿಟ್ಟ ವ್ಯಕ್ತಿತ್ವದ, ವೈಚಾರಿಕ ಮನೋಭಾವನೆಯ, ಸ್ವತಂತ್ರ ಪ್ರವೃತ್ತಿಯ ಶಿವಶರಣೆ ಎಂದು ಗುರುತಿಸಲಾಗುತ್ತದೆ.

ಶೂನ್ಯ ಸಂಪಾದನೆಗಳು, ಚಾಮರಸನ ಪ್ರಭುಲಿಂಗಲೀಲೆ, ಸಿದ್ಧನಂಜೇಶನ ಗುರುರಾಜ ಚಾರಿತ್ರ್ಯ, ಶಾಂತಲಿಂಗ ದೇಶಿಕರ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಈ ಎಲ್ಲ ಕೃತಿಗಳಲ್ಲಿ ಅಲ್ಲದೇ ಜಾನಪದ ತ್ರಿಪದಿಗಳಲ್ಲಿ ಮುಕ್ತಾಯಕ್ಕ ಮತ್ತು ಅಜಗಣ್ಣರ ಜೀವನದ ವಿವರಣೆ ದೊರೆಯುತ್ತದೆ. ಇವುಗಳಲ್ಲಿ ಉಲ್ಲೇಖವಾಗಿರುವಂತೆ ಮುಕ್ತಾಯಕ್ಕ ಗದಗ ಜಿಲ್ಲೆ ಲಕ್ಕುಂಡಿ ಗ್ರಾಮದವಳು. ಶರಣ ಅಜಗಣ್ಣನ ಸಹೋದರಿ. ಆಕೆಗೆ ಆಧ್ಯಾತ್ಮ ಗುರು, ತಂದೆ ಎಲ್ಲವೂ ಆಗಿದ್ದ ಅಜಗಣ್ಣನ ಮಾರ್ಗದಲ್ಲಿ ನಡೆದವಳು. ವಚನ ಸಾಹಿತ್ಯದ ಧ್ರುವತಾರೆ ಎನಿಸಿಕೊಂಡ ಮುಕ್ತಾಯಕ್ಕಳ ಸುಮಾರು 37 ವಚನಗಳು ಅಜಗಣ್ಣ, ಅಜಗಣ್ಣ ತಂದೆ ಎಂಬ ಅಂಕಿತನಾಮದಲ್ಲಿ ದೊರೆತಿವೆ.

**ಆರೆಂದು ಕುರುಹ ಬೆಸಗೊಳಲು, ಏನೆಂದು ಹೇಳುವೆನಯ್ಯಾ?**
**ಕಾಯದೊಳಗೆ ಮಾಯವಿಲ್ಲ;**
**ಭಾವದೊಳಗೆ ಭ್ರಮೆಯಿಲ್ಲ.**
**ಕರೆದು ಬೆಸಗೊಂಬಡೆ ಕುರುಹಿಲ್ಲ.**
**ಒಬ್ಬರಿಗೂ ಹುಟ್ಟದೆ, ಅಯೋನಿಯಲ್ಲಿ ಬಂದು**
**ನಿರ್ಬುದ್ಧಿಯಾದವಳನ್ನೇನನ್ನಾ?**
**ತಲೆಯಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ**
**ಎನ್ನ ಅಜಗಣ್ಣತಂದೆಯ ಬೆನ್ನಬಳಿಯವಳಾನಯ್ಯಾ.**

ನಾನು ಎಂಬ ಅಹಂಕಾರದಿಂದ ದೂರವಾಗಿ ದೇಹದ ನಶ್ವರತೆ ಅರಿತು ಅಂತರಂಗದ ಅರಿವು ಪಡೆದು ಬಹಿರಂಗದ ಆಡಂಬರದಿಂದ ದೂರವಾದವಳು

ಮುಕ್ತಾಯಕ್ಕ. ಬುದ್ಧಿಯಿಲ್ಲದ ತನಗೆ ಅರಿವಿನ ಕುರುಹಾದವನು ಅಜಗಣ್ಣ. ತಾನು ಅಜಗಣ್ಣನ ಸಹೋದರಿ ಎಂದು ಗುರುತಿಸಿಕೊಳ್ಳುವ ಮುಕ್ತಾಯಕ್ಕಳ ವಚನ ಇಬ್ಬರ ನಡುವಿನ ಅನನ್ಯ ಭ್ರಾತೃ ಪ್ರೇಮವನ್ನು ಮಾರ್ಮಿಕವಾಗಿ ತಿಳಿಸುತ್ತದೆ.

**ಅರಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು**
**ಅರಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು**
**ನಾನೆಂತು ಬದುಕುವೆನಣ್ಣಾ?**
**ಕತ್ತಲೆ ಬೆಳಗ ಕಾಂಬ ಸಂದೇಹಿ ನಾನೊಬ್ಬಳು**
**ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತೋ ಅಜಗಣ್ಣ ನಿನ್ನಯೋಗ!**

ಮರ್ತ್ಯಲೋಕದ ಮಾನವರು ಅಂತರಂಗದ ಅರಿವಿನಲ್ಲಿಯೇ ಪರಶಿವನಿದ್ದಾನೆ ಎಂಬುದನ್ನು ಅರಿತು ನಿತ್ಯತೃಪ್ತರಾಗದೆ ಬಾಹ್ಯದ ಭೋಗವಸ್ತುವನ್ನಗಿದು ಜಗಿದು ಕಡಿಯುವುದರಲ್ಲಿಯೇ ಕಾಲಹರಣ ಮಾಡುತ್ತಿದ್ದಾರೆ. ನಿಜವಾದ ನಿತ್ಯಸುಖದ ಅರಿವಿಲ್ಲದೇ ಭವದ ದುಃಖದಲ್ಲಿ ಮುಳುಗಿದ್ದಾರೆ. ಇಂಥ ಮರವೆಯ ಮಾನವರ ಮಧ್ಯೆ ನಾನು ಹೇಗೆ ಇರಲಿ? ಕತ್ತಲೆ-ಬೆಳಕುಗಳ (ಮರೆವು-ಅರಿವು) ಸಂದೇಹದಲ್ಲಿ ಸಿಲುಕಿದ್ದೇನೆ. ನನ್ನ ಅರಿವಿನ ಕಣ್ಣು ಕಟ್ಟಿ ಯೋಗದ ಕನ್ನಡಿಯ ತೋರುತ್ತಿರುವೆ ಎಂದು ಆಧ್ಯಾತ್ಮಿಕ ಅನುಭೂತಿಗಾಗಿ ಮುಕ್ತಾಯಕ್ಕ ಹಂಬಲಿಸುವಳು.

**ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು.**
**ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು.**
**ದರ್ಪಣದೊಳಗಣ ಪ್ರತಿಬಿಂಬದಂತೆ**
**ಹಿಡಿವರಿಗಳಲ್ಲದಿರಬೇಕು ಅಣ್ಣಾ.**
**ಕೂರ್ಮನ ಶಿಶುವಿನ ಸ್ನೇಹದಂತೆ ಇರಲೊಲ್ಲದೆ**
**ಆರೂಢಗೆಟ್ಟೆಯೋ ಅಜಗಣ್ಣಾ.**

ಶಿವಯೋಗಿಯು ಬಾಹ್ಯದಲ್ಲಿ ಕುರುಡಾಗಿದ್ದು ಅಂತರಂಗದಲ್ಲಿ ಲಿಂಗದೊಂದಿಗೆ ಸಾಮರಸ್ಯ ಹೊಂದಬೇಕು. ಇದುವೇ ಲಿಂಗಾಂಗ ಸಾಮರಸ್ಯ. ಮೂಗನ ಕಾವ್ಯವನ್ನು ಅನುಭವ ಮಾತ್ರದಿಂದಲೇ ಗ್ರಹಿಸಿದಂತೆ ಶಿವಯೋಗದಲ್ಲೂ ಅನುಭವದಿಂದ ಗ್ರಹಿಸುವಿಕೆಯಾಗಬೇಕು. ಕನ್ನಡಿಯಲ್ಲಿನ ಪ್ರತಿಬಿಂಬವನ್ನು ಹೇಗೆ ಹಿಡಿಯಲು ಸಾಧ್ಯವಿಲ್ಲವೋ ಹಾಗೇ ಶಿವಯೋಗಿಯು ಕಾಯ, ಮನ, ಜೀವ, ಜಗತ್ತಗಳ ಮಧ್ಯದಲ್ಲಿದ್ದೂ ನಿರ್ಲಿಪ್ತವಾಗಿರಬೇಕು. ಇದುವೇ ಪೂರ್ಣಯೋಗದ ನಿಲುವು ಎಂದು ಮುಕ್ತಾಯಕ್ಕ ಅರಿತಿದ್ದಳು.

**ಜ್ಞಾನಮೂಲ ಗುರುಸೇವೆ ಎಂಬೆನು.**
**ಐಶ್ವರ್ಯಮೂಲ ಲಿಂಗಾರ್ಚನೆ ಎಂಬೆನು.**
**ಮೋಕ್ಷಮೂಲ ಘಟಸಂತೃಪ್ತಿ ಎಂಬೆನು ಅಜಗಣ್ಣಲಿಂಗವೆ.**

ಹುಟ್ಟಿನ ಸಾರ್ಥಕತೆ ಜ್ಞಾನ ಸಂಪಾದನೆಯಲ್ಲಿದೆ. ಆದರೆ ಇಲ್ಲಿ ಮುಕ್ತಾಯಕ್ಕ

ಹೇಳುವುದು ಅಂತರಂಗದ ಆತ್ಮಜ್ಞಾನ ಸಂಪಾದನೆಯ ಮಾರ್ಗ. ಅದು ದೊರೆಯಬೇಕಾದರೆ ಬಲ್ಲ ಗುರುಗಳ ಆಶೀರ್ವಾದ ಮತ್ತು ಮಾರ್ಗದರ್ಶನ ಅವಶ್ಯಕ. ಪರಶಿವನನ್ನು ಸಾಕ್ಷಾತ್ಕರಿಸಿಕೊಂಡ ದಿವ್ಯ ಗುರುವಿನ ಉಪದೇಶವನ್ನು ಆಲಿಸದೇ ಆತನ ಸೇವೆ ಮಾಡದೆ ಆತ್ಮಜ್ಞಾನ ಲಭಿಸಲಾರದು. ಗುರುವನ್ನೇ ಶಿವನೆಂದು ಭಾವಿಸಿ ಸೇವೆ ಮಾಡಿದಾಗ ಗುರುವು ತನ್ನ ಅಂತರಂಗದ ಆತ್ಮವಿದ್ಯೆಯನ್ನು ಧಾರೆ ಎರೆಯುತ್ತಾನೆ. ಅದರಂತೆ ಐಶ್ವರ್ಯವೆಂದರೆ ಅಂತರಂಗ ಮತ್ತು ಬಹಿರಂಗದ ಸಂಪತ್ತು. ಸಕಲವೆಲ್ಲವನ್ನು ಸೃಷ್ಟಿಸಿದ ಶಿವನನ್ನು ಪೂಜಿಸಿ ಪ್ರಾರ್ಥಿಸಿದರೆ ಏನೆಲ್ಲವೂ ದೊರೆಯುವುದು. ಮುಕ್ತಿಯೆಂಬುದು ಸತ್ತ ಮೇಲೆ ದೊರೆಯುವುದಲ್ಲ. ಬದುಕಿದ್ದಾಗಲೇ ಪಡೆಯುವುದು. ನಮ್ಮ ಪಾಲಿಗೆ ಬಂದದ್ದರಲ್ಲಿ ಸಂತೃಪ್ತಿಯನ್ನು ಹೊಂದುವುದೇ ನಿಜವಾದ ಮುಕ್ತಿ. ಜ್ಞಾನ ಸಂಪಾದನೆ, ಐಶ್ವರ್ಯ ಸಂಪಾದನೆ ಮತ್ತು ಅವುಗಳ ಬಗೆಗಿನ ಸಂತೃಪ್ತಿಯೇ ನಿಜವಾದ ಮೋಕ್ಷವೆಂದವಳು ಮುಕ್ತಾಯಕ್ಕ.

**ನುಡಿಯಲುಬಾರದು ಕೆಟ್ಟನುಡಿಗಳ.**
**ನಡೆಯಲುಬಾರದು ಕೆಟ್ಟನಡೆಗಳ.**
**ನುಡಿದಡೇನು ನುಡಿಯದಿರ್ದಡೇನು?**
**ಹಿಡಿದ ವ್ರತ ಬಿಡದಿರಲು, ಅದೆ ಮಹಾಜ್ಞಾನದಾಚರಣೆ**
**ಎಂಬೆನು ಅಜಗಣ್ಣ ತಂದೆ.**

ಅನ್ಯರ ಮನಸ್ಸಿಗೆ ನೋವನ್ನು ಉಂಟುಮಾಡುವ ಮಾತುಗಳನ್ನು ಆಡಬಾರದು ಹಾಗೂ ಕೇಡು ಬಯಸಿ ಆನಂದಿಸುವ ಸ್ವಭಾವ ನಮ್ಮದಾಗಬಾರದು. ಮಾತನಾಡುವ ಇಲ್ಲವೇ ಮಾತನಾಡದೇ ಇರುವುದರಿಂದ ಯಾವ ಬದಲಾವಣೆ ಆಗುವುದಿಲ್ಲ. ಆದರೆ ಹಿಡಿದ ವ್ರತವನ್ನು ಮುರಿದರೆ ಕೇಡಾಗುವುದು. ವ್ರತವೆಂದರೆ ದೇವರ ಪೂಜೆ ಆಚರಣೆಗಳಲ್ಲ. ಮೈ, ಮನಸ್ಸುಗಳನ್ನು ಹತೋಟಿಯಲ್ಲಿಟ್ಟುಕೊಂಡು ಒಳ್ಳೆಯ ನಡೆನುಡಿಗಳನ್ನು ಅಳವಡಿಸಿಕೊಳ್ಳುವುದೇ ನಿಜವಾದ ವ್ರತ. ಅರಿವೇ ದೊಡ್ಡದಲ್ಲ. ಅರಿವು ಜೀವನದಲ್ಲಿ ಆಚರಣೆಗೆ ಬಂದಾಗಲೇ ಅದಕ್ಕೆ ಬೆಲೆ ಎನ್ನುವ ಮುಕ್ತಾಯಕ್ಕ ಅರಿವು ಆಚರಣೆಗಳೆರಡೂ ಮನುಷ್ಯನಿಗೆ ಎಡೆಬಿಡದ ಸಂಗಾತಿಗಳಾಗಿರಬೇಕೆನ್ನುವರು.

**ಅಲರೊಳಡಗಿದ ಪರಿಮಳದಂತೆ,**
**ಪತಂಗದೊಳಡಗಿದ ಅನಲನಂತೆ,**
**ಶಶಿಯೊಳಡಗಿದ ಷೋಡಶಕಳೆಯಂತೆ,**
**ಉಲುಹಡಗಿದ ವಾಯುವಿನಂತೆ,**
**ಸಿಡಿಲೊಳಡಗಿದ ಗಾತ್ರದ ತೇಜದಂತೆ**
**ಇರಬೇಕಯ್ಯಾ ಯೋಗ, ಎನ್ನ ಅಜಗಣ್ಣತಂದೆಯಂತೆ**

ಈ ವಚನವು ಆಧ್ಯಾತ್ಮಿಕ ಅಭಿವ್ಯಕ್ತಿಯ ಶ್ರೇಷ್ಠ ಸಂಪ್ರದಾಯಕ್ಕೆ ಸಾಕ್ಷಿಯಾಗಿದೆ. ಮುಕ್ತಾಯಕ್ಕ ಭೌತಿಕ ರೂಪಕಗಳ ಮೂಲಕ ನಿಜಭಕ್ತಿಯ ಅರಿವನ್ನು ಮೂಡಿಸಿದ್ದಾರೆ.

ಹೂವಿನೊಳಗೆ ಅಡಗಿರುವ ಪರಿಮಳದಂತೆ, ಪತಂಗದೊಳಡಗಿದ ಅನಲನಂತೆ, ಶಶಿಯೊಳಡಗಿದ ಷೋಡಶಕಳೆಯಂತೆ, ನಿಜವಾದ ಯೋಗವು ಅವ್ಯಕ್ತವಾಗಿದ್ದರೂ ಆಳವಾದ ಶಕ್ತಿ, ಸಂಪೂರ್ಣತೆ, ಚೈತನ್ಯವನ್ನು ಹೊಂದಿರುವುದು ಎಂಬುದನ್ನು ಸುಂದರ ಸಾದೃಶ್ಯಗಳ ಮೂಲಕ ಬಿತ್ತರಿಸಿರುವಳು.

**ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬವರು**
**ಶಿಶು ಕಂಡ ಕನಸಿನಂತಿರಬೇಕಲ್ಲದೆ,**
**ನುಡಿದು ಹೇಳುವನ್ನಕ್ಕರ ಭಿನ್ನವಲ್ಲದೇನು ಹೇಳಾ?**
**ಅರಿವರತು ಮರಹು ನಷ್ಟವಾಗಿ ಗುರುವ ತೋರಿದೆನೆಂಬರು.**
**ಇದಿರಿಗೆ ಕರುಳಕಲೆಯನರುಹುವ ಪರಿಯೆಂತು ಹೇಳಾ?**
**ಮನದ ಕೊನೆಯ ಮೊನೆಯ ಮೇಲಣ ಅರಿವಿನ ಕಣ್ಣಮುಂದೆ**
**ಸ್ವಯಂಪ್ರಕಾಶ ತೋರುತ್ತಿದ್ದಡೆ ತಾನಾಗಬಲ್ಲನೆ?**
**ನೆರೆಯರಿತು ಮರೆಯಬಲ್ಲಡೆ**
**ಎನ್ನ ಅಜಗಣ್ಣನಂತೆ ಶಬ್ದಮುಗ್ಧನಾಗಿರಬೇಕಲ್ಲದೆ,**
**ಶಬ್ದಸಂದಣಿಯ ಮಾತು ಸರಿಯಲ್ಲ ನೋಡಯ್ಯಾ.**

ಲಿಂಗಾಂಗ ಸಾಮರಸ್ಯದ ಅದ್ವೈತಾನುಭವ ಮಗು ಕಂಡ ಕನಸಿನಂತೆ ನಗುವಿನಲ್ಲೇ ವ್ಯಕ್ತವಾಗಬೇಕೇ ವಿನಃ ಬಾಯಿಮಾತಿನಲ್ಲಿ ಹೇಳುವಂತಾದರೆ ಅದು ದ್ವೈತವೆನಿಸುವುದು. ಮಾತಿನಲ್ಲಿ ಹೇಳುವ ಅನುಭಾವ ಪರಿಪೂರ್ಣವೆನಿಸಲಾರದು. ಲಿಂಗಾಂಗ ಸಾಮರಸ್ಯದ ಅನುಭವವನ್ನು ಅಂತರಂಗವು ಅರಿಯುವ ದಾರಿಯನ್ನು ತಾನೇ ಕಂಡುಕೊಳ್ಳಬೇಕೆ ವಿನಃ ಅನ್ಯರಾಡುವ ಶಬ್ದಾಡಂಬರದಿಂದ ಅದು ಅರಿವಿಗೆ ಬರಲಾರದು ಎಂಬುದು ಮುಕ್ತಾಯಕ್ಕಳ ನಿಲುವು. ಆಧ್ಯಾತ್ಮದಲ್ಲಿ ಅಲ್ಲಮಪ್ರಭುಗಳಂತಹ ಅನುಭಾವಿಗಳಿಗೆ ಸರಿಸಾಟಿಯಾಗಿ ನಿಲ್ಲಬಲ್ಲಂಥವಳು ಎಂಬುದಕ್ಕೆ ಅವರ ಈ ವಚನ ಸಾಕ್ಷಿಯಾಗಿದೆ.

**ತನುವಿನೊಳಗೆ ತನುವಾಗಿ, ಮನದೊಳಗೆ ಮನವಾಗಿ,**
**ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದಡೆ**
**ಕೆಲಬರಿಗೆ ಅರಿಯಬಪ್ಪುದೆ?**
**ಅಂತರಂಗದೊಳಗೆ ಅದೆ ಎಂದಡೇನು?**
**ಮನ ಮುಟ್ಟುವನ್ನಕ್ಕರ ಕಾಣಬಾರದು.**
**ಬಹಿರಂಗದಲ್ಲಿ ಅದೆ ಎಂದಡೇನು?**
**ಪೂಜಿಸುವನ್ನಕ್ಕರ ಕಾಣಬಾರದು.**
**ಸಾಕಾರವಲ್ಲದ ನಿರಾಕಾರ ಲಿಂಗವು**
**ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು.**
**ಎನ್ನ ಮನದೊಳಗೆ ಘನವನುಗೊಳಿಸಿ ತೋರುವರಿಲ್ಲದ ಕಾರಣ**
**ಎನ್ನ ಅಜಗಣ್ಣನಿಕ್ಕಿದ ದಸರಿದೊಡಕಿಂಗೆ ಬೆರಗಾದೆ ಕಾಣಾ ಪ್ರಭುವೆ.**

ಆಧ್ಯಾತ್ಮಿಕ ನೆಲೆಯಲ್ಲಿ ಶಾಶ್ವತ ಸ್ಥಾನ ಪಡೆಯಬಲ್ಲ ವಚನ ಇದಾಗಿದೆ. ದೇಹದಲ್ಲಿ ಚೈತನ್ಯದ ರೂಪದಲ್ಲಿ, ಮನಸ್ಸಿನಲ್ಲಿ ಭಾವದ ರೂಪದಲ್ಲಿ, ಪ್ರಾಣದಲ್ಲಿ ಜೀವಶಕ್ತಿಯಾಗಿ ಪರಮಾತ್ಮನು ನೆಲೆಸಿದ್ದಾನೆ. ಆದರೂ ಅಂತರಂಗದಲ್ಲಿ ಅಡಗಿರುವ ಆ ಚಿರಂತನ ಶಕ್ತಿಯನ್ನು ಗುರುತಿಸಲು ಹುಲುಮಾನವರಿಗೆ ಸಾಧ್ಯವಾಗುತ್ತಿಲ್ಲ. ಅಂತರಂಗದಲ್ಲಿ ಪರಮಾತ್ಮನು ಇದ್ದಾನೆಂದಾದರೆ, ಮನಸ್ಸಿಗೆ ಪರಮಾತ್ಮನ ಇರುವಿಕೆಯ ಅನುಭವವಾಗಬೇಕು. ಬಹಿರಂಗದಲ್ಲಿ ಪರಮಾತ್ಮನಿರುವುದಾದರೆ ನಿರ್ದಿಷ್ಟ ಆಕಾರ ಅಥವಾ ಸ್ವರೂಪದಲ್ಲಿ ಗೋಚರಿಸುವುದಿಲ್ಲ. ಏಕೆಂದರೆ ಪರಮಾತ್ಮನು ನಿರಾಕಾರ ಲಿಂಗ ಸ್ವರೂಪಿ. ಚಂಚಲವಾದ ಮತ್ತು ವ್ಯಾಕುಲಗೊಂಡ ಮನಸ್ಸಿನಿಂದ ನಿರಾಕಾರತ್ವವನ್ನು ಅರಿಯಲು ಸಾಧ್ಯವಿಲ್ಲ. ನನ್ನ ಅಜ್ಞಾನದ ಮುಸುಕು ಕಳಚಿ ಸಾಕಾರ–ನಿರಾಕಾರ, ಅಂತರಂಗ–ಬಹಿರಂಗದ ಗೊಂದಲವನ್ನು ಪರಿಹರಿಸುವ ಗುರುವಿನ ಅಗತ್ಯವನ್ನು ಈ ವಚನದಲ್ಲಿ ಕಾಣಬಹುದು.

**ಗುರುವಚನದಿಂದಲ್ಲದೆ ಲಿಂಗವನರಿಯಬಾರದು.**
**ಗುರುವಚನದಿಂದಲ್ಲದೆ ಜಂಗಮವನರಿಯಬಾರದು.**
**ಗುರುವಚನದಿಂದಲ್ಲದೆ ಪ್ರಸಾದವನರಿಯಬಾರದು.**
**ಗುರುವಚನದಿಂದಲ್ಲದೆ ತನ್ನ ತಾನರಿಯಬಾರದು.**
**ಹಿಂದಣ ಜನ್ಮದಲ್ಲಿ ಲಿಂಗವ ಪೂಜಿಸಿ ಇಂದು ಜ್ಞಾನೋದಯವಾದಡೆ**
**ಗುರುವಿಲ್ಲದ ಮುನ್ನ ಆಯಿತ್ತೆನ್ನಬಹುದೆ?**
**ತನ್ನಲ್ಲಿ ತಾನು ಸನ್ನಹಿತನಾದೆಹೆನೆಂದಡೆ ಗುರುವಿಲ್ಲದೆ ಆಗದು ಕೇಳಾ.**
**ಎನ್ನ ಅಜಗಣ್ಣನೆಂಬ ಗುರುವಿಲ್ಲದೆ**
**ಆರೂಢಿಯ ಕೂಟ ಸಮನಿಸದು ಕೇಳಾ.**

ಗುರುವಿನ ಮಾರ್ಗದರ್ಶನವಿಲ್ಲದೆ ಲಿಂಗ, ಜಂಗಮ, ಪ್ರಸಾದದ ಅರಿವು ಆಗಲಾರದು. ಅಂತರಂಗದ ಅರಿವಿಗೆ ಗುರು ಕಾರುಣ್ಯ ಬೇಕು. ಸಾಧನೆಯ ಮಾರ್ಗದಲ್ಲಿ ಭಕ್ತನಿಗೆ ಗುರುವಿನ ಮಾರ್ಗದರ್ಶನ ಕೊನೆಯವರೆಗೂ ಬೇಕು. ಭವಿ ತನ್ನ ತಾನು ಅರಿತಾಗಲೂ ಆ ಅರಿವೇ ಗುರುವಿನ ಸ್ಥಾನದಲ್ಲಿರುತ್ತದೆ. ಗುರುವಿಲ್ಲದೆ ಶಿಷ್ಯ ಏನನ್ನೂ ಸಾಧಿಸಲಾರ ಎಂದು ಈ ವಚನದಲ್ಲಿ ಮುಕ್ತಾಯಕ್ಕ ಗುರು ಶಿಷ್ಯ ಸಂಬಂಧವನ್ನು ವಿವರಿಸಿದ್ದಾಳೆ.

**ತನ್ನ ತಾನರಿದವಂಗೆ ಅರಿವೆ ಗುರು.**
**ಅರಿವರತು ಮರಹು ನಷ್ಟವಾದಲ್ಲಿ, ದೃಷ್ಟ ನಷ್ಟವೆ ಗುರು.**
**ದೃಷ್ಟ ನಷ್ಟವೆ ಗುರು ತಾನಾದಲ್ಲಿ,**
**ಮುಟ್ಟಿ ತೋರಿದವರಿಲ್ಲದಡೇನು?**
**ಸಹಜವ ನೆಲೆಗೊಳಿಸುವ ನಿರ್ಣಯ ನಿಷ್ಪತ್ತಿಯೆ ಗುರು ನೋಡಾ.**
**ಗುರು ತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ.**

ಈ ವಚನದಲ್ಲಿ ಮುಕ್ತಾಯಕ್ಕ ಗುರುವಿನ ಕುರಿತು ಅನುಭಾವದ ನೆಲೆಯಲ್ಲಿ

ತರ್ಕಬದ್ಧವಾಗಿ ಹೇಳಿದ್ದಾಳೆ. ಲಿಂಗಾಂಗ ಸಮರಸದ ಅನುಭವ ಉಂಟಾಗಬೇಕಾದರೆ ಗುರು ಎನ್ನುವ ತತ್ವ ಬೇಕು ಎಂಬುದು ಮುಕ್ತಾಯಕ್ಕಳ ನಂಬಿಕೆ. ನಾನೇ ಗುರುವಾಗಿದ್ದರೂ ನನ್ನಂತರಂಗದಲ್ಲಿ ಸಮರಸವಾಗಿರುವ ಶಿಷ್ಯನ ಅನುಭಾವದ ಎಚ್ಚರ ನನ್ನಲ್ಲಿರಬೇಕು. ಆ ಅರಿವಿನ ಮರವೆಯು ಗುರುವಾಗುವ ಬಗೆಯನ್ನೂ ವಾಸ್ತವದ ಮೂಲಕ ಅರಿವು ಪಡೆಯುವ ಕ್ರಮವನ್ನು ಸೂಚಿಸಿದ್ದಾಳೆ. ಅಂದರೆ ಲಿಂಗಾಂಗ ಸಾಮರಸ್ಯದ ಮೂಲಕ ಬರುವ ಅರಿವು ಗುರುವಾಗುವಂತೆ ದೈನಂದಿನ ಬದುಕಿನ ಸತ್ಯಾಂಶದ ಮೂಲಕ ದೊರೆಯುವ ಅರಿವೂ ಕೂಡ ಗುರುವಾಗುತ್ತದೆ.

**ಹಿಡಿದಾಚಾರವ ಬಿಡದನ್ನಕ್ಕರ,**
**ಎನ್ನ ಅರಿವ ಮರೆದನ್ನಕ್ಕರ,**
**ಎನ್ನ ಮನವ ಸುಡದನ್ನಕ್ಕರ,**
**ಎನ್ನ ಬೆಡಗಿನ ಗುರುವ ತೊರೆಯದನ್ನಕ್ಕರ,**
**ಸುಸರವೆಂತಪ್ಪುದು ಹೇಳಾ?**
**ಹೋಹ ಬಟ್ಟೆಯನರಿಯದನ್ನಕ್ಕರ**
**ತಾನಾಗಬಾರದು ಕಾಣಾ ಎನ್ನ ಅಜಗಣ್ಣ ತಂದೆಯಂತೆ.**

ಮುಕ್ತಾಯಕ್ಕ ಈ ವಚನದಲ್ಲಿ ಬರಿ ಮಾತಿನ ಅದ್ವೈತವನ್ನು ಅಲ್ಲಗಳೆಯುತ್ತಾಳೆ. ಅಭಿನ್ನ ಅನುಭವ ಉಂಟಾಗಬೇಕು. ಅಂಗಭಾವದ ಆಚಾರ ಅಳಿದು ತಾನೆ ಪರವಸ್ತು ಎಂಬ ಅರಿವು ಮಾಯವಾಗಬೇಕು. ಮನದ ಚಂಚಲತೆ ಅರಿವೆಂಬ ಅಗ್ನಿಯಲ್ಲಿ ಸುಡಬೇಕು. ಪರಶಿವನಲ್ಲಿ ಕೂಡಿದೆನೆಂಬ ಸೂಕ್ಷ್ಮಭಾವವೂ ಮೂಡಬಾರದು. ಹೀಗೆ ಅರಿವು, ಆಚಾರ, ಮನದ ಸಂಕಲ್ಪ, ಭಾವದ ಬಯಕೆಗಳೆಲ್ಲವೂ ನಾಶವಾಗದೆ ತಾನೇ ಪರವಸ್ತುವಾದ ಅನುಭವವು ದೊರೆಯಲಾರದು ಎನ್ನುವ ಮುಕ್ತಾಯಕ್ಕ ತಾನೇ ತಾನಾಗುವ ಯೋಗ ಮಾರ್ಗವನ್ನರಿಯುವ ಪರಿಯನ್ನು ಅರಹುವಳು.

**ಉಟ್ಟುದ ತೊರೆದವಂಗೆ ಊರೇನು, ಕಾಡೇನು?**
**ನಷ್ಟಸಂತಾನಕ್ಕೆ ಕುಲವೇನು, ಛಲವೇನು?**
**ಹುಟ್ಟುಗೆಟ್ಟಾತಂಗೆ ಪುಣ್ಯವೇನು, ಪಾಪವೇನು?**
**ಅದು ಕೆಟ್ಟದು ಕೆಟ್ಟದು.**
**ನಿನ್ನ ನೀನರಿಯದೆ ಬಟ್ಟಬಯಲಲ್ಲಿ ಬಿದ್ದೆಯಲ್ಲಾ ಅಜಗಣ್ಣತಂದೆ!**

ಲೌಕಿಕ ಆಸೆ ಆಕಾಂಕ್ಷೆಗಳನ್ನು ತೊರೆದವರಿಗೆ ಊರು ಕಾಡುಗಳ ಮಧ್ಯೆ ವ್ಯತ್ಯಾಸವಿರುವುದಿಲ್ಲ. ಭೌತಿಕ ಬಂಧನಗಳಿಂದ ಮುಕ್ತನಾದವರಿಗೆ ಕುಲ ಛಲಗಳ ಹಂಗಿರಲಾರದು. ಹುಟ್ಟು ಸಾವುಗಳ ಚಕ್ರವನ್ನು ಮೀರಿದವರಿಗೆ ಪಾಪ ಪುಣ್ಯಗಳ ಗೊಡವೆ ಇರಲಾರದು. ಈ ಆತ್ಮಜ್ಞಾನವಿಲ್ಲದೆ ಆಧ್ಯಾತ್ಮಿಕ ಪಯಣ ಸಾಧ್ಯವಾಗದು ಎಂಬಲ್ಲಿ ಮುಕ್ತಾಯಕ್ಕಳಿಗೆ ಇರುವ ಆತ್ಮಜ್ಞಾನದ ಅರಿವು ವ್ಯಕ್ತವಾಗುವುದು.

**ಕ್ರೋಧವೆಂಬ ಹೊಲಗೇರಿಯ ಹೊರವಂಟು,**

**ಭೇದವೆಂಬೈವರನತಿಗಳೆದನು.**
**ನಾದಬಿಂದುವೆಂಬ ತೀರ್ಥವನು ಮಿಂದು,**
**ಆದಿ ಎಂಬ ಅಷ್ಟದಳವಂ ಕಿತ್ತೆತ್ತಿ ಹೋದನು.**
**ನಾದ ಬಿಂದು ಆದಿ ಬೋಧೆಗೆ ಒಳಗಾದ ಘನವನು**
**ಸಾದಿಸಿದಂ ಭೋ ಎನ್ನ ಅಜಗಣ್ಣತಂದೆ.**

ಕೋಪದ ಕೈಯಲ್ಲಿ ಸಿಕ್ಕಿಹಾಕಿಕೊಳ್ಳಲಾರದೆ ಪಂಚೇಂದ್ರಿಯಗಳನ್ನು ಸೋಲಿಸಿದವನು. ಸೃಷ್ಟಿಯ ಮೂಲಭೂತ ಸತ್ಯಗಳನ್ನು ಅರಿತು ಅಜ್ಞಾನವನ್ನು ನಾಶಮಾಡಿಕೊಂಡವನು. ಆಧ್ಯಾತ್ಮದ ಅನುಭೂತಿಯನ್ನು ಪಡೆಯಲು ಸಾಧ್ಯವೆಂಬ ಸಂದೇಶವನ್ನು ಮುಕ್ತಾಯಕ್ಕಳ ಈ ವಚನದಲ್ಲಿ ಕಾಣಬಹುದು.

**ಜಲದ ಚಿತ್ತಾರದ ಕೊರಳಿನಲ್ಲಿ**
**ದಾರವಿಲ್ಲದ ಮುತ್ತಿನ ಸರವು ನೋಡಾ!**
**ಚಿತ್ತಾರವಳಿಯದೆ, ಮುತ್ತು ಉಳಿಯದೆ**
**ನಿಂದ ನಿಲವಿನ ಪರಿಯ ನೋಡಾ!**
**ಗಮನವಿಲ್ಲದ ಗಾಂಭೀರ್ಯ, ಶಬ್ದವಿಲ್ಲದ ಸಾರಾಯ**
**ಸಮತೆಯಾಗಿ ನಿಂದ ಅಜಗಣ್ಣಂಗೆ ಇನ್ನಾರು ಸರಿ ಎಂಬೆನು.**

ಅಸಾಮಾನ್ಯ ಮತ್ತು ವಿರೋಧಾಭಾಸದ ಚಿತ್ರವನ್ನು ನೀಡುವ ಈ ವಚನದಲ್ಲಿ ಜಲದ ಚಿತ್ತಾರವು ಭೌತಿಕ ಪ್ರಪಂಚದ ಅನಿತ್ಯತೆ ಮತ್ತು ದಾರವಿಲ್ಲದ ಮುತ್ತು ಭೌತಿಕ ಬಂಧನಗಳನ್ನು ಮೀರಿದ ಆಳವಾದ ಆಧ್ಯಾತ್ಮಿಕ ಅನುಭೂತಿಯ ಶಾಶ್ವತತೆಯನ್ನು ಸೂಚಿಸುತ್ತವೆ. ಆದರೆ ಈ ಅನಿತ್ಯತೆ ಮತ್ತು ಶಾಶ್ವತತೆಗಳ ಸಾಮಾನ್ಯ ತಿಳುವಳಿಕೆಯನ್ನು ಮೀರಿದ ಆಂತರಿಕ ಆಧ್ಯಾತ್ಮದ ವಾಸ್ತವ ಪ್ರಜ್ಞೆಯನ್ನು ಪಡೆಯಬೇಕು. ಈ ಪ್ರಜ್ಞೆ ಸಹಜ ಮತ್ತು ನಿರಂತರವಾಗಿರಬೇಕು. ಬಾಯಾಡಂಬರವಾಗಿರದೆ ನಿರಂತರ ಅಂತರ್ಗತವಾದ ಅನುಭಾವವಾಗಿರುವುದು. ಈ ಅನುಭವವು ಮಾನಸಿಕ ಶಾಂತತೆ, ಭಾವನಾತ್ಮಕ ಸ್ಥಿರತೆ, ಮತ್ತು ಸಮಚಿತ್ತವುಳ್ಳವರಿಗೆ ಮಾತ್ರ ಸಾಧ್ಯವೆಂಬುದು ಮುಕ್ತಾಯಕ್ಕಳ ನಿಲುವು.

**ಸತ್ಯವುಳ್ಳಲ್ಲಿ ಶಬ್ದ ಹಿಂಗದು;**
**ಭಾವವುಳ್ಳಲ್ಲಿ ಭಕ್ತಿ ಹಿಂಗದು.**
**ಮೂರುಲೋಕದ ಹಂಗಿನ ಶಬ್ದವೇನಯ್ಯಾ?**
**ಮುಕುತಿಯನೇವೆನಯ್ಯಾ**
**ಎನ್ನ ಯುಕುತಿಯ ಮುಕುತಿಯ ಬಕುತಿಯ ಪದವನು ಕಂಡು**
**ನಾಚಿದನಜಗಣ್ಣತಂದೆ.**

ಶಾಶ್ವತವಾದ ಸತ್ಯವಿದ್ದಲ್ಲಿ ಜ್ಞಾನವು ನಿರಂತರವಾಗಿರುವುದು. ನಿಜಭಾವವಿದ್ದಲ್ಲಿ ಭಕ್ತಿ ಕಡಿಮೆಯಾಗದು. ಮೂರುಲೋಕದ ಹಂಗು, ಸತ್ಯ ಮತ್ತು ಭಕ್ತಿಗೆ ಇರಲಾರದು. ಅವು ಶಾಶ್ವತವಾದವು. ಈ ವಿವೇಕದಿಂದ ಭಕ್ತಿ ಮತ್ತು ಮುಕ್ತಿಯ ಉನ್ನತ ಸ್ಥಿತಿಯನ್ನು ಸಾಧಿಸಿದಾಗ ಸ್ವತಃ ಗುರುವೇ ಬೆರಗಾಗುವನು.

**ಸಿಡಿಲುಹೊಯ್ದ ಬಾವಿಗೆ ಸೋಪಾನವುಂಟೆ?**
**ಷಡುವರ್ಣರಹಿತನಿಗೆ ಬಣ್ಣವುಂಟೆ?**
**ಕಡಲ ದಾಟಿದವನಿಗೆ ಹರುಗೋಲುಂಟೆ?**
**ಬಿಡದೆ ಕಟ್ಟಿದ ಒರೆಗೆ ಸಂಧಾನವುಂಟೆ?**
**ಒಡಲಿಲ್ಲದವನಿಗೆ ಒಡವೆಯುಂಟೆ?**
**ನುಡಿಯುಂಟೆ ಎಮ್ಮ ಅಜಗಣ್ಣದೇವಂಗೆ?**

ಸಿಡಿಲು ಬಡಿದ ಬಾವಿಗೆ ಮೆಟ್ಟಿಲುಗಳ ಅವಶ್ಯಕತೆ ಇಲ್ಲದಿರುವಂತೆ ಭವಬಂಧಗಳನ್ನು ಮೀರಿದವರಿಗೆ ಯಾರ ಸಹಾಯ ಬೇಕಿಲ್ಲ. ಅರಿಷಡ್ವರ್ಗಗಳನ್ನು ಗೆದ್ದವರಿಗೆ ನಿರ್ದಿಷ್ಟ ಗುಣವಿಲ್ಲ. ಆಧ್ಯಾತ್ಮಿಕ ಜ್ಞಾನ ಸಾಗರವನ್ನು ದಾಟಿದವರಿಗೆ ತಾತ್ಕಾಲಿಕ ಸಹಾಯದ ಅವಶ್ಯಕತೆಯಿಲ್ಲ. ಭೌತಿಕತೆಯನ್ನು ಮೀರಿದವರಿಗೆ ಲೌಕಿಕತೆಯ ಆಸರೆ ಬೇಕಿಲ್ಲ ಎಂದು ಹೇಳುವ ಮುಕ್ತಾಯಕ್ಕ ಮೌನವೇ ಲೌಕಿಕ ಆಶೆ ಆಕಾಂಕ್ಷೆಗಳನ್ನು ಮೀರಿದ ಈ ಆಧ್ಯಾತ್ಮಿಕ ಸ್ಥಿತಿಯನ್ನು ಸೂಚಿಸುತ್ತದೆ ಎನ್ನುವಳು.

**ಸ್ಫಟಿಕಪ್ರಜ್ವಲಜ್ಯೋತಿ ಘಟದೊಳಗೆ ತೋರುತ್ತಿರೆ,**
**ದಿಟಪುಟವನತಿಗಳೆದು ಸಟೆಯ ಬಳಸುವರೆ?**
**ಅಂತರಂಗದ ಶುದ್ಧಿಯ ಬಹಿರಂಗಕ್ಕೆ ತಂದು**
**ಸಂತೈಸಲರಿಯದೆ ಮರುಳಾದಿರಣ್ಣಾ?**
**ಯಂತ್ರದ ಕೀಲಕೂಟದ ಸಂಚದ ಭೇದವು ತಪ್ಪಿ,**
**ಮಂತ್ರ ಭಿನ್ನವಾಗಿ ನುಡಿವರೆ ಅಜಗಣ್ಣಾ?**

ಸ್ಫಟಿಕದಂತೆ ಪ್ರಜ್ವಲಿಸುವ ಆಧ್ಯಾತ್ಮಿಕ ಜ್ಞಾನ ಜ್ಯೋತಿಯು ಹೃದಯದಲ್ಲಿ ಬೆಳಗುತ್ತಿದ್ದರೂ ಅದನ್ನು ಮರೆಮಾಚಿ ಸುಳ್ಳಿನ ಮಾರ್ಗವನ್ನು ಅನುಸರಿಸಬಾರದು. ಅಂತರಂಗದ ಶುದ್ಧಿಯನ್ನು ಬಹಿರಂಗದಲ್ಲಿ ಬಳಸಬೇಕು. ಈ ದೇಹದ ನಶ್ವರತೆಯ ಭೇದವನರಿತು ನಡೆಯಬೇಕು. ಇಂತಿಲ್ಲದವರನ್ನು ಆಶ್ಚರ್ಯದಿಂದ ಪ್ರಶ್ನಿಸುವ ಮುಕ್ತಾಯಕ್ಕ ಆಧ್ಯಾತ್ಮಿಕತೆಯಲ್ಲಿ ಇರಬೇಕಾದ ಪ್ರಾಮಾಣಿಕತೆ, ಅಂತರಂಗ ಶುದ್ಧಿ ಮತ್ತು ಜ್ಞಾನದ ಮಹತ್ವವನ್ನು ತಿಳಿಸಿದ್ದಾರೆ.

**ಸಿಡಿಲುಹೊಯ್ದ ಬಾವಿಗೆ ಸೋಪಾನವೇಕೊ?**
**ನೆರೆಯರಿದ ಬಳಿಕ ಮತ್ತೆ ಮತಿ ಹುಟ್ಟಲುಂಟೆ?**
**ಸೊಡರುಳ್ಳ ಮನೆಗೆ ಮತ್ತೆ ತಮಂಧವೆಂಬುದೇನೋ?**
**ತನ್ನಲ್ಲಿ ತಾನು ತದ್ಗತವಾದ ಬಳಿಕ**
**ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲ ನೋಡಾ ಎನ್ನ ಅಜಗಣ್ಣತಂದೆಗೆ.**

ಸಿಡಿಲು ಎಂಬುದಿಲ್ಲಿ ಪರಿವರ್ತಕ ಶಕ್ತಿಯ ಸಂಕೇತವಾಗಿದೆ. ಆಧ್ಯಾತ್ಮಿಕ ಜ್ಞಾನದ ಸಿಡಿಲು ಬಡಿದ ಮೇಲೆ ಲೌಕಿಕ ಜ್ಞಾನವೆಂಬ ಮೆಟ್ಟಿಲುಗಳ ಅವಶ್ಯಕತೆಯಿಲ್ಲ. ಈ ಆಧ್ಯಾತ್ಮಿಕ ಜ್ಞಾನದ ಮೂಲಕ ಅಜ್ಞಾನ ಕಳಚಿದ ಮೇಲೆ ಬೇರೊಂದು ಪಡೆವ ಜ್ಞಾನವಿಲ್ಲ. ಈ ಜ್ಞಾನದ ಬೆಳಕು ದೊರೆತ ಮೇಲೆ ಅಜ್ಞಾನದ ಕತ್ತಲೆಗೆ ಸ್ಥಾನವೇ

ಇರುವುದಿಲ್ಲ. ಇಂತು ತನ್ನೊಳಗೆ ತಾನು ಲೀನವಾಗಿ ಆತ್ಮಸಾಕ್ಷಾತ್ಕಾರವಾದ ಬಳಿಕ ನಾನೇ ಬ್ರಹ್ಮನೆಂಬ ಅಹಂಕಾರವಿರುವುದಿಲ್ಲ ಎಂದು ಹೇಳುವ ಮುಕ್ತಾಯಕ್ಕ ಜ್ಞಾನದ ಬೆಳಕು ಅಹಂಕಾರದ ಅಸ್ತಿತ್ವವನ್ನು ಅಳಿಸಿಹಾಕುವುದು ಎಂಬುದನ್ನು ನಂಬಿದವಳು.

**ನಡೆದು ನಡೆದು ನಡೆಯ ಕಂಡವರು**
**ನುಡಿದು ನುಡಿದು ಹೇಳುತ್ತಿಹರೆ?**
**ನುಡಿದು ನುಡಿದು ಹೇಳುವನ್ನಕ್ಕರ**
**ನಡೆದುದೆಲ್ಲಾ ಹುಸಿಯೆಂಬೆನು.**
**ಮಾತಿನ ಮಥನದಿಂದಾದ ಅರಿವು**
**ಕರಣಮಥನದಿಂದಾದುದಲ್ಲದೆ,**
**ಅನುಪಮ ಸ್ವರಭೇದವಾದ ಪರಿ ಎಂತು ಹೇಳಾ?**
**ಇದಿರ ಗೆಲ್ಲಬೇಕೆಂದು ನುಡಿದುಕೊಂಡಡೇನು,**
**ಮನಕ್ಕೆ ಮನವೆ ಸಾಕ್ಷಿಯಾಗಿ ನಿಷ್ಪತಿಯಲ್ಲ ನೋಡಾ?**
**ಎನ್ನ ಅಜಗಣ್ಣತಂದೆ ಶಬ್ದಕ್ಕೆ ಹೇಸಿ ಮುಗ್ಧನಾದನು.**

ಆಧ್ಯಾತ್ಮಿಕ ಮಾರ್ಗದಲ್ಲಿ ಅನುಭವ ಪಡೆದವರು ಅದನ್ನು ಪದೇ ಪದೇ ಬಾಯಿಮಾತಿನಲ್ಲಿ ಹೇಳುತ್ತಿದ್ದರೆ ಅದು ಸುಳ್ಳು ಎನಿಸುವುದು. ಏಕೆಂದರೆ ಕೇವಲ ಮಾತುಗಳಿಂದ ಬರುವ ಜ್ಞಾನವು ಇಂದ್ರಿಯಗಳ ಅನುಭವದಿಂದ ಬರುವ ಜ್ಞಾನಕ್ಕೆ ಸಮನಾದುದಲ್ಲ. ಈ ಜ್ಞಾನವು ವಿಶಿಷ್ಟವಾಗಿದ್ದು ಪ್ರತಿಯೊಬ್ಬರ ಅನುಭವವೂ ಭಿನ್ನವಾಗಿರುವುದು. ಈ ಅನುಭವಕ್ಕೆ ಮನಸ್ಸೇ ಸಾಕ್ಷಿಯಾಗಿರುವುದು. ನಿಜವಾದ ಆಧ್ಯಾತ್ಮಿಕ ಅನುಭೂತಿಯು ಮೌನಕ್ಕೆ ಶರಣಾಗಿ ಅಂತರಂಗದಲ್ಲಿಯೇ ಅನುಭವಿಸಬೇಕಾದುದು ಎಂಬುದು ಮುಕ್ತಾಯಕ್ಕಳ ನಿಲುವು.

**ನುಡಿಯ ಹಂಗಿನ್ನೂ ನಿಮಗೆ ಹಿಂಗದು,**
**ನಡೆಯನೆಂತು ಪರರಿಗೆ ಹೇಳುವಿರಿ?**
**ಒಡಲ ಹಂಗಿನ ಸುಳುಹು ಬಿಡದುದ**
**ಎನ್ನೊಡನೆ ಮತ್ತೇತರ ಅನುಭವವಣ್ಣಾ?**
**ತಾನಾದಲ್ಲದೆ ಇದಿರಿಗೆ ಹೇಳಬಹುದೆ?**
**ಅರಿವ ತೋರಬಲ್ಲಡೆ ತನ್ನನರುಹದೆ ಅರಿವನು ಕಾಣಾ**
**ಎನ್ನ ಅಜಗಣ್ಣತಂದೆ.**

ಆಧ್ಯಾತ್ಮದ ಬಗೆಗಿನ ಬಾಯಾಡಂಬರದ ಗೀಳು ಹೋಗದಿದ್ದರೆ ಪರರಿಗೆ ಅದ್ವೈತ ಬೋಧಿಸಲು ಸಾಧ್ಯವಾಗುವುದಿಲ್ಲ. ದೇಹದ ಬಗೆಗಿನ ವ್ಯಾಮೋಹವಳಿಯದೇ ಅನುಭಾವಿಯಾಗಲೂ ಸಾಧ್ಯವಿಲ್ಲ. ಈ ಅನುಭವ ಸ್ವತಃ ಪಡೆಯದಿದ್ದರೆ ಇತರರಿಗೆ ಅರಿವು ನೀಡುವುದು ಇನ್ನೂ ಕಷ್ಟ ಎನ್ನುವಲ್ಲಿ ಮುಕ್ತಾಯಕ್ಕ ಸ್ವಾನುಭವದ ಮೂಲಕ ಆಧ್ಯಾತ್ಮದ ಜ್ಞಾನ ಪಡೆಯುವ ಮಹತ್ವವನ್ನು ತಿಳಿಸುವಳು.

**ಕೈಯದು ಕುರುಹು, ಬಾಯದು ಬೊಬ್ಬೆ.**

**ಉಲಿಯದಿರೊ ಭಾವಾ, ಉಲಿಯದಿರೊ ಭಾವಾ!**
**ವಾರಿಕಲ್ಲ ಕೊಡನಲ್ಲಿ ಮುತ್ತು ಮಾಣಿಕವ ತುಂಬಿ,**
**ಎತ್ತುವರಿಲ್ಲದೆ ಸಖಿಯನರಸುತಿಪ್ಪೆ.**
**ಮನದ ತನುವಿನಲ್ಲಿ, ಆ ತನುವಿನ ಮನದಲ್ಲಿ**
**ತನಗೆ ತಾನೆತ್ತಿಕೊಂಡಡೆ,**
**ಮನ ಮೇರೆದಪ್ಪಿ ಕರಗಿ ಉಕ್ಕಿತ್ತು ನಮ್ಮ ಅಜಗಣ್ಣನಯೋಗ.**

ಕೈ ಭೌತಿಕ ಅಸ್ತಿತ್ವದ ಸಂಕೇತವಾಗಿದ್ದು ಬಾಯಿ ಹೊರಗಿನ ಅಭಿವ್ಯಕ್ತಿಯ ಸಂಕೇತ. ಅಂತರಂಗದ ಅನುಭವದ ಸಂಪೂರ್ಣತೆಯನ್ನು ತಿಳಿಸಲು ಕೇವಲ ಮಾತುಗಳಿಂದ ಸಾಧ್ಯವಿಲ್ಲ. ಆದ್ದರಿಂದ ಆಧ್ಯಾತ್ಮಿಕ ಭಾವನೆಗಳನ್ನು ಪದಗಳಲ್ಲಿ ವ್ಯಕ್ತಪಡಿಸುವುದಕ್ಕಿಂತ ಮೌನಕ್ಕೆ ಶರಣು ಹೋಗುವುದು ಉತ್ತಮ ಎನ್ನುವ ಮುಕ್ತಾಯಕ್ಕ ಮಂಜಿನ ಕೊಡವೆಂಬ ನಶ್ವರ ಶರೀರದಲ್ಲಿರುವ ಜ್ಞಾನವೆಂಬ ಮುತ್ತು ಮಾಣಿಕ್ಯವನ್ನು ರಕ್ಷಿಸಲು ಮಾರ್ಗದರ್ಶನದ ಅವಶ್ಯಕತೆಯನ್ನು ಎತ್ತಿ ತೋರುತ್ತಾಳೆ. ಈ ಮಾರ್ಗದರ್ಶಕ ಬೇರಾರೋ ಆಗಿರದೆ ತನ್ನಾತ್ಮವೇ ಆಗಿದ್ದು ಅಲ್ಲಿ ಮಿತಿಯಿಲ್ಲದ ಆನಂದ ಮತ್ತು ಆಧ್ಯಾತ್ಮಿಕ ಜ್ಞಾನವು ತುಂಬಿರುವುದು. ದೇಹ ಮತ್ತು ಮನಸ್ಸುಗಳು ಕೇವಲ ಆತ್ಮವನ್ನು ಆವರಿಸಿರುವ ಪದರಗಳಾಗಿವೆ ಎಂಬುದು ಮುಕ್ತಾಯಕ್ಕಳ ಅಭಿಮತ.

**ನುಡಿಯೆನೆಂಬಲ್ಲಿಯೆ ನುಡಿ ಅದೆ.**
**ನಡೆಯೆನೆಂಬಲ್ಲಿಯೆ ನಡೆ ಅದೆ.**
**ಭಾವಿಸೆನೆಂಬಲ್ಲಿಯೆ ಭಾವ ಅದೆ.**
**ಅರಿದು ಮರೆದೆನೆಂಬಲ್ಲಿಯೆ ಅರಿವು ಮರೆವು ಅದೆ.**
**ಅಂಗದಲ್ಲಿ ಲಿಂಗ ಲೀಯವಾಯಿತ್ತೆಂದಡೆ**
**ಅಲ್ಲಿಯೆ ಅಂಗ ಅದೆ.**
**ಅನಂಗಸಂಗಿಯಾದೆನೆಂಬಲ್ಲಿಯೆ ವಿಷಯಸೂತಕ ಅದೆ.**
**ನಾನೆ ನಾನಾದೆನೆಂಬಲ್ಲಿಯೆ ನೀನೆಂಬುದು ಅದೆ.**
**ಅರಿದು ಮರೆದ ಪರಿ ಎಂತು ಹೇಳಾ?**
**ಅರಿವು ನಷ್ಟವಾಗಿ, ಮರೆವು ಲಯವಾಗಿಪ್ಪಡೆ**
**ಎನ್ನ ಅಜಗಣ್ಣತಂದೆಯಲ್ಲದೆ ಮತ್ತಾರನೂ ಕಾಣೆ.**

ಈ ವಚನವು ಮುಕ್ತಾಯಕ್ಕಳ ಶಬ್ದ ಚಾತುರ್ಯಕ್ಕೆ ಹಿಡಿದ ಕನ್ನಡಿ. ಇಲ್ಲಿ ಮಾತು ಮತ್ತು ಕ್ರಿಯೆಗಳು ಅಂತರ್ಗತವಾದ ವಾಸ್ತವತೆಯನ್ನು ಸೂಚಿಸುತ್ತವೆ. ಅರಿವು ಮರೆವುಗಳು ವಿರೋಧಾತ್ಮಕವಾಗಿದ್ದರೂ ಒಂದೇ ಅನುಭವದ ಭಾಗಗಳಾಗಿವೆ. ಅಂತೆಯೇ ಅಂಗದಲ್ಲಿ ಲೀನವಾಗುವ ಲಿಂಗ ಮತ್ತು ಲಿಂಗಾಂಗ ಸಾಮರಸ್ಯವನ್ನು ಸಾರುವ ಅಂಗವಿದೆ. ಅಂಗ ಸಂಗವಾಗಲೀ ಅನಂಗಸಂಗವಾಗಲೀ ವಿಷಯ ವಾಸನೆಗಳಿಗೆ ಒಳಗಾಗಿವೆ. ನಾನು, ನೀನು, ಆನು, ತಾನು ಎಂಬಲ್ಲಿಯೇ ಅಹಂಕಾರವೆಂಬ ಬೀಜ ಮೊಳಕೆಯೊಡೆಯುವಾಗ ಅರಿವಿನ ಮರವೆಯ ತತ್ವವೇನು ಎಂದು ಕೇಳುವ ಮುಕ್ತಾಯಕ್ಕ ಜ್ಞಾನ ನಷ್ಟವಾಗಿ, ಮರೆವು ಲಯವಾಗಿ

ದ್ವೈತಭಾವವಳಿದು ಅದ್ವೈತಾನುಭವವಾದಾಗ ದೊರೆಯುವ ಆನಂದಕ್ಕೆ ಪಾರವಿಲ್ಲವೆನ್ನುವಳು.

**ತೊರೆಯ ಕಟ್ಟೆಯ ಕಟ್ಟಿ ನಿಲಿಸಲುಬಹುದೆ?**
**ನೆರೆ ಮರುಳಿಗೆ ಬುದ್ಧಿಯ ಹೇಳಲುಬಹುದೆ?**
**ತರಿಸಲುಪೋದವನಿದಿರಿಚ್ಚೆಯನರಿಯದೆ ಮರೆದಿದ್ದಡೆ**
**ಹಗೆ ಇರಿವುದು ಮಾಣ್ಬನೆ?**
**ದೂರದಲ್ಲಿ ಹೋದವ ಊರ ಸುದ್ದಿಯನರಿಯ.**
**ಹೇಳದೆ ಬಯಲಾದ ಕಾಣಾ, ಎನ್ನ ಅಜಗಣ್ಣತಂದೆ.**

ತೊರೆಯಂತೆ ಚಲನಶೀಲವಾದ ಬದುಕಿನಲ್ಲಿ ಆಗುವ ಬದಲಾವಣೆಗಳನ್ನು ಶಾಶ್ವತವಾಗಿ ನಿಲ್ಲಿಸಲು ಸಾಧ್ಯವಿಲ್ಲ. ಅದರಂತೆ ಅಜ್ಞಾನವೆಂಬ ಪ್ರವಾಹದಲ್ಲಿ ಮುಳುಗಿರುವ ಮೂರ್ಖರಿಗೆ ಬುದ್ಧಿ ಹೇಳಲೂ ಸಾಧ್ಯವಿಲ್ಲ. ಪರರ ಆಶಯಗಳಿಗೆ ಬೆಲೆ ಕೊಡದಾಗ ಹಗೆತನಕ್ಕೆ ಕಾರಣವಾಗುವುದು. ಭೌತಿಕವಾಗಿ ದೂರವಿದ್ದಾಗ ಆಧ್ಯಾತ್ಮದ ಅರಿವು ಕಷ್ಟವಾಗುತ್ತದೆ ಎನ್ನುವ ಈ ವಚನವು ಸಹಜ ಪ್ರಶ್ನೆಗಳ ಮೂಲಕ ಆಧ್ಯಾತ್ಮಿಕ ಜ್ಞಾನವನ್ನು ಪಡೆಯುವ ಮಾರ್ಗವನ್ನು ಸೂಚಿಸುತ್ತದೆ.

**ತನುವಿಡಿದನಾಗಿ ಅನುವನರಿಯದೆ ಕೆಟ್ಟೆನು.**
**ಮನವಿಡಿದೆನಾಗಿ ಅರಿವು ಉಳಿಯದೆ ಕೆಟ್ಟೆನು.**
**ಭಾವದ ಬಯಕೆ ಹಿಂಗದಾಗಿ ವಿಯೋಗಿಯಾಗಿ ಕೆಟ್ಟೆನು.**
**ಅರಿವ ನುಡಿದು ಮರಹಿಗೊಳಗಾದೆನು.**
**ಎನ್ನ ಕಾಣದೆ ಭಿನ್ನಜ್ಞಾನಿಯಾದೆನು.**
**ಅಜಗಣ್ಣನೆಂಬ ಮಹಿಮನು ಘನವೇದ್ಯನಾಗಿ**
**ಎನ್ನ ಮತಿಗೆ ಮರವೆಯ ಮಾಡಿಹೋದನು.**

ಲೌಕಿಕ ಬಂಧನಗಳಲ್ಲಿ ಸಿಲುಕಿದಾಗ ಆತ್ಮದ ಸ್ವರೂಪವನ್ನು ಅರಿಯಲು ಆಗುವುದಿಲ್ಲ. ಮನಸ್ಸಿನ ಚಂಚಲತೆಯಿಂದ ಜ್ಞಾನವು ಸ್ಥಿರವಾಗುಳಿಯುವುದಿಲ್ಲ. ಭೌತಿಕ ಆಸೆ ಆಕಾಂಕ್ಷೆಗಳಿಂದ ಆಧ್ಯಾತ್ಮಿಕ ಏಕತೆ ಸಾಧ್ಯವಿಲ್ಲ. ಆಧ್ಯಾತ್ಮದ ಜ್ಞಾನ ಕೇವಲ ಆಡುಮಾತಾಗದೇ ಅನುಭವವೇದ್ಯವಾಗಬೇಕು. ಆತ್ಮಜ್ಞಾನವಿಲ್ಲದೇ ಬೇರೆಲ್ಲ ಜ್ಞಾನವು ಅಪೂರ್ಣ ಮತ್ತು ಭ್ರಮೆಯಿಂದ ಕೂಡಿರುವುದು ಎನ್ನುವಲ್ಲಿ ಮುಕ್ತಾಯಕ್ಕ ದೇಹ ಮನಸ್ಸು ಮತ್ತು ಭಾವನೆಗಳ ಲೌಕಿಕ ಆಕರ್ಷಣೆಯಿಂದ ದೂರವಾದಾಗ ಆತ್ಮಜ್ಞಾನ ದೊರೆಯುವುದು ಎಂಬುದನ್ನು ಮನಗಂಡವಳು.

ತನ್ನೆಲ್ಲ ವಚನಗಳಲ್ಲಿ ಅಗಲಿದ ಅಣ್ಣ ಅಜಗಣ್ಣನನ್ನು ನೆನೆಯುವ ಮುಕ್ತಾಯಕ್ಕ ಯಾರು ಇಲ್ಲದವಳೆಂದು ಹೆದರಿಸಿದರೆ ಹೆದರುವವಳು ನಾನಲ್ಲ ಬದಲಾಗಿ ಒಲವಿನ ಒತ್ತೆಗಲ್ಲನ್ನು ಬೆವರಿಸುವವಳು ಎಂದು ಶಿವನಿಗೆ ಸವಾಲು ಹಾಕುವ ಆತ್ಮವಿಶ್ವಾಸ ಹೊಂದಿರುವಳು. ಅಣ್ಣನ ಅಗಲಿಕೆಯ ನೋವಿದ್ದರೂ ತಾನು ಒಬ್ಬಂಟಿಯಲ್ಲ ತನ್ನ

ಸುತ್ತ ಶರಣ ಬಳಗವೇ ಇದೆ ಎಂಬುದನ್ನು ನೆನೆಯುವಳು.

**ಎನ್ನ ಭಾವಕ್ಕೆ ಗುರುವಾದನಯ್ಯಾ ಬಸವಣ್ಣನು.**
**ಎನ್ನ ನೋಟಕ್ಕೆ ಲಿಂಗವಾದನಯ್ಯಾ ಚೆನ್ನಬಸವಣ್ಣನು.**
**ಎನ್ನ ಜ್ಞಾನಕ್ಕೆ ಜಂಗಮವಾದನಯ್ಯಾ ಪ್ರಭುದೇವರು.**
**ಎನ್ನ ಪರಿಣಾಮಕ್ಕೆ ಪ್ರಸಾದವಾದನಯ್ಯಾ ಮರುಳಶಂಕರದೇವರು.**
**ಎನ್ನ ಹೃದಯಕ್ಕೆ ಮಂತ್ರವಾದನಯ್ಯಾ ಮಡಿವಾಳಯ್ಯನು.**
**ಇಂತೀ ಐವರ ಕಾರುಣ್ಯಪ್ರಸಾದವ ಕೊಂಡು**
**ಬದುಕಿದೆನಯ್ಯಾ ಅಜಗಣ್ಣತಂದೆ.**

ತನ್ನ ಭಾವಕ್ಕೆ ಗುರುವಾದ ಬಸವಣ್ಣ, ನೋಟಕ್ಕೆ ಲಿಂಗವಾದ ಚೆನ್ನಬಸವಣ್ಣ, ಜ್ಞಾನಕ್ಕೆ ಜಂಗಮವಾದ ಪ್ರಭುದೇವ ಪರಿಣಾಮಕ್ಕೆ ಪ್ರಸಾದವಾದ ಮರುಳಶಂಕರ ದೇವ, ಹೃದಯಕ್ಕೆ ಮಂತ್ರವಾದ ಮಡಿವಾಳಯ್ಯರನ್ನು ಸ್ಮರಿಸುವ ಮುಕ್ತಾಯಕ್ಕ ಅವರ ಕಾರುಣ್ಯಪ್ರಸಾದಕ್ಕೆ ಶರಣಾಗುವಳು.

**'ಅಹುದಹುದು ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು.**
**ಎನ್ನ ಅಜಗಣ್ಣ ತಂದೆಯನೊಳಗೊಂಡಿಪ್ಪ ನಿಮ್ಮ ಮಹಿಮೆಗೆ**
**ನಮೋ ನಮೋ ಎನುತಿರ್ದೆನು.**
**'ಘನಮಹಿಮ ಶರಣರ ಸಂಗದಿಂದ ಘನಕ್ಕೆ ಘನವೇದ್ಯವಾದ ಬಳಿಕ**
**ಶಬ್ದಮುಗ್ಧವಾಗಿ ಎನ್ನ ಅಜಗಣ್ಣತಂದೆಯ ಬೆರೆಸಿದ ಬಳಿಕ**
**ಉರಿಯುಂಡ ಕರ್ಪೂರದಂತಾದೆನಯ್ಯಾ'**

ತನ್ನ ತಾನರಿತ ಶರಣನ ಮಹಿಮೆ ಯಾರಿಗೂ ಕಾಣುವುದಿಲ್ಲ. ಅದು ಕುರುಹಿಲ್ಲದ ಘನತತ್ವ. ಇಂಥ ಮಹಾಮಹಿಮ ತತ್ವಗಳನ್ನರಿಯದ ನನಗೆ ನಿಮ್ಮ ಸಂಗದಿಂದ ಘನವೇನೆಂದು ಅರಿವಾಯಿತು. ನಾನು ಕಂಡು ಹೇಳಿದ ಯೋಗ ನನ್ನಲ್ಲಿಯೇ ಕಂಡು ಬಂತು ಎನ್ನುವ ಮೂಲಕ ಶರಣರ ಸಂಗದಿಂದ ತನಗಾದ ಆಧ್ಯಾತ್ಮಿಕ ಅನುಭೂತಿಯನ್ನು ಮನದುಂಬಿ ನೆನೆಯುವಳು. ಆ ಕಾಲದ ಶರಣರೂ ಆಕೆಯನ್ನು ಮನದುಂಬಿ ನೆನೆದಿದ್ದಾರೆ. ಚನ್ನಬಸವಣ್ಣ, ಸಿದ್ಧರಾಮೇಶ್ವರ, ಕೋಲಶಾಂತಯ್ಯ ಮೊದಲಾದ ಶರಣರ ಹನ್ನೊಂದು ವಚನಗಳಲ್ಲಿ ಮುಕ್ತಾಯಕ್ಕಳ ಪ್ರಸ್ತಾಪವಿದೆ. ಅಣ್ಣನ ಆಶ್ರಯದಲ್ಲಿ ಮುಗ್ಧವಾಗಿ ಬೆಳೆದ ಮುಕ್ತಾಯಕ್ಕಳ ಆಧ್ಯಾತ್ಮಿಕ ಜ್ಞಾನವು ಎಂಥವರನ್ನು ನಿಂತು ಯೋಚಿಸುವಂತೆ ಮಾಡಿದೆ. ಮುಕ್ತಾಯಕ್ಕ ಎಲ್ಲರ ಅಕ್ಕರೆಯ ಅಕ್ಕಳಾಗಿರುವುದು ಹಲವು ವಚನಗಳಿಂದ ವಿದಿತವಾಗಿದೆ.

*** ಇಲ್ಲಿ ಉಲ್ಲೇಖಿಸಿರುವ ವಚನಗಳನ್ನು ಕಣಜ ಅಂತರ್ಜಾಲದಿಂದ ಪಡೆದುಕೊಳ್ಳಲಾಗಿದೆ.**

**ಪರಾಮರ್ಶನ ಗ್ರಂಥಗಳು:**


1. ಭೂಸರೆಡ್ಡಿ ಎಸ್.ಎಸ್. & ಮಧು ವೆಂಕಾರೆಡ್ಡಿ, (1993), ಮುಕ್ತಾಯಕ್ಕನ ವಚನಗಳು, ಬಸವ ಸಮಿತಿ, ಬೆಂಗಳೂರು.
2. ಸುಜಾತ ವಿಶ್ವನಾಥ, (2023), ಶಿವಶರಣೆಯರು, ವಿಶ್ವಪ್ರಕಾಶನ, ಬೆಂಗಳೂರು.
3. ಶಿವಣ್ಣ ಆರ್. (ಸಂ), (2017), 12ನೇ ಶತಮಾನದ ಶರಣೆಯರು, ಬಸವತತ್ವ ಪ್ರಚಾರ ಹಾಗೂ ಸಂಶೋಧನಾ ಕೇಂದ್ರ, ಬೆಂಗಳೂರು.
4. ಭೂಸನೂರಮಠ ಸಂ.ಶಿ. (ಸಂ), (1958), ಪ್ರಭುದೇವರ ಶೂನ್ಯ ಸಂಪಾದನೆ, ಶ್ರೀ. ಸಿದ್ಧಲಿಂಗೇಶ್ವರಮಠ, ಗುಲ್ಬರ್ಗಾ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.